ಒ.ಎಸ್.  - 07/2018

ಡಿ.ಡಬ್ಲ್ಯು - 03

**ದಿನಾಂಕ  03-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 4 ನೇ ಪ್ರತಿವಾದಿ ಪರ ಶ್ರೀ  ಡಿಎಸ್ ವಕೀಲರಿಂದಃ**

ಸಾಕ್ಷಿಗೆ ಒಂದು  ದಾಖಲೆಯನ್ನು ತೋರಿಸಿ ಸದ್ರಿ ಜಿಪಿಎ ಯನ್ನು ನಿಮ್ಮ ತಂದೆ ಅಸಲು ದಾವಾ ಸಂಖ್ಯೆ: 31/2022  ನ್ನು ನಡೆಸಲು ಕೊಟ್ಟಿದ್ದ ದಾಖಲೆ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಹೌದು ಎಂದು ಒಪ್ಪಿಕೊಂಡಿದ್ದು, ಸದ್ರಿ ದಾಖಲೆಯನ್ನು ನಿಡಿ 15 ಎಂದು ಗುರುತಿಸಲಾಯಿತು . ಸಾಕ್ಷಿಗೆ ಅಸಲು ದಾವಾ ಸಂಖ್ಯೆ: 31/2022  ರ ವಾದಪತ್ರದ ದೃಢೀಕೃತ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು, ಸದ್ರಿ ದಾಖಲೆಯನ್ನು ನಿಡಿ 16 ಎಂದು ಗುರುತಿಸಲಾಯಿತು.  ಅಸಲು ದಾವಾ ಸಂಖ್ಯೆ: 31/2022 ರಲ್ಲಿ ನಾನು ಹಾಕಿದ್ದ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು, ಸದ್ರಿ ದಾಖಲೆಯನ್ನು ನಿಡಿ-17 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ : 31/2022  ರ ಆದೇಶದ ಪುಟದ ಪ್ರತಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು, ಸದ್ರಿ ದಾಖಲೆಯನ್ನು ನಿಡಿ-18 ಎಂದು ಗುರುತಿಸಲಾಯಿತು. ದಾವಾಸ್ವತ್ತಿನ ಬಳಿ ಈ ದಾವೆಯ 4 ನೇ ಪ್ರತಿವಾದಿ ಬಂದು ದಾವಾ ಸ್ವತ್ತಿನಲ್ಲಿ ತನಗೆ ಹಕ್ಕು ಇರುವುದಾಗಿ ನಿಮ್ಮ ತಂದೆಗೆ ಮತ್ತು ನಿಮಗೆ ಯಾವುದೇ ಹಕ್ಕು ಇಲ್ಲ ಎಂದು ನಿಮಗೆ ತಿಳಿಸಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದುತಿಳಿಸಿರುತ್ತಾರೆ . ನಾನು ಮತ್ತು ನನ್ನ ತಂದೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ನಿಡಿ 14 ವಿಲ್ ನೊಂದಾವಣಿ ಆಗುವ ಸಮಯದಲ್ಲಿ ಹೇಳಿಕೆ ಕೊಟ್ಟಿದ್ದೇವೆ ಎಂದರೆ ಸರಿ. ನಾನು ಕೊಟ್ಟ ಹೇಳಿಕೆಯನ್ನು ಓದಿ ತಿಳಿದುಕೊಂಡಿದ್ದೇನೆ . ನನ್ನ ತಂದೆ ಕೊಟ್ಟ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ . ಸಾಕ್ಷಿಗೆ ಸಬ್ ರಿಜಿಸ್ಟ್ರಾರ್ ಮುಂದೆ ವಿಲ್ ನೊಂದಾವಣೆ ಆಗುವ ಸಮಯದಲ್ಲಿ ಅವರು ಕೊಟ್ಟಿದ್ದ ಹೇಳಿಕೆಯನ್ನು

ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಆ ರೀತಿ ಹೇಳಿಕೆ ಕೊಟ್ಟಿದ್ದೇನೆ ಎಂದು ಒಪ್ಪಿಕೊಂಡಿದ್ದರಿಂದ ಸದ್ರಿ ಹೇಳಿಕೆಯ ಭಾಗವನ್ನು ನಿಡಿ-14(ಇ) ಎಂದು ಗುರುತಿಸಲಾಯಿತು. ವಿಲ್ ಬರೆಯುವಾಗ ನಾನು , ನನ್ನ ತಂದೆ ಮಾತ್ರ ಇದ್ದೆವು. ವೀಲುನಾಮೆಯನ್ನು ವಕೀಲರಾದ ಇಕ್ಬಾಲ್ ರವರ ಕಚೇರಿಯಲ್ಲಿ ಬರೆಯಲಾಗಿರುತ್ತದೆ . ಸಾಕ್ಷಿ ಮುಂದುವರಿದು ನಾನು ನನ್ನ ತಂದೆ ಜೊತೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿರುತ್ತೇನೆ . ಅಸಲು ದಾವಾ ಸಂಖ್ಯೆ ಃ 31/2022 ನ್ನು ಯಾವ ವಕೀಲರು ನಡೆಸಿದ್ದರು ಎಂದು ನನಗೆ ಗೊತ್ತಿಲ್ಲ. ಅದನ್ನು ಎಲ್ಲಾ ನನ್ನ ತಂದೆ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಅಸಲು ದಾವಾ ಸಂಖ್ಯೆ ಃ 31/2022 ರಲ್ಲಿ ನಾನು ಸಲ್ಲಿಸಿದ್ದ ಮುಖ್ಯವಿಚಾರಣೆ ಪ್ರಮಾಣ ಪತ್ರವನ್ನು ಅಂದರೆ ನಿಡಿ 17 ನ್ನು ಯಾವ ವಕೀಲರು ತಯಾರಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಕೀಲರಾದ ಇಕ್ಬಾಲ್ ಎಂದು ತಿಳಿಸಿರುತ್ತಾರೆ. ಅಸಲು ದಾವಾ ಸಂಖ್ಯೆ : 31/2022 ರಲ್ಲಿ ಆದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ ಃ 31/2022 ರನ್ನು ನನ್ನ ತಂದೆ ಏಕೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಅಸಲು ದಾವಾ ಸಂಖ್ಯೆ ಃ 31/2022 ನ್ನು ಯಾರ ಮೇಲೆ ಹಾಕಿದ್ದರು ಎಂದು ಕೂಡ ನನಗೆ ಗೊತ್ತಿಲ್ಲ .

ಮೋಹನ್ ಪೈ ಮತ್ತು ವನಜಾ ಪೈ ತೀರಿಹೋಗುವ ಮೊದಲೇ ದಾವಾ ಸ್ವತ್ತನ್ನು ಪರಭಾರೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೋಹನ್ ಪೈಯವರನ್ನು ಈ ದಾವೆಯ 3 ನೇ ಪ್ರತಿವಾದಿಯೇ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ . ಮೋಹನ್ ಪೈ ರವರು 2 ನೇ ಪ್ರತಿವಾದಿಗೆ ಜಿಪಿಎ ಕೊಟ್ಟು ಅವರ ಮುಖೇನ 3 ನೇ ಪ್ರತಿವಾದಿಗೆ ಆಸ್ತಿಯನ್ನು ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದನ್ನು 3 ನೇಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ತಂದೆಗೂ ಮೋಹನ್ ಪೈ ಗೂ ಯಾವುದೇ ಆತ್ಮೀಯತೆ ಬಾಂದವ್ಯ ಇರಲಿಲ್ಲ ಎಂದರೆ ಸರಿಯಲ್ಲ. ಮೋಹನ್ ಪೈ ರವರ ಸಂಪೂರ್ಣ ಆರೈಕೆಯನ್ನು 3 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನಾಗಲೀ ನನ್ನ ತಂದೆಯಾಗಲೀ ಇತರೇ ಯಾರೇ ಆಗಲೀ ಮೋಹನ್ ಪೈ ರವರಿಗೆ ಯಾವುದೇ ಸಹಾಯ ಮಾಡಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 3 ರಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮೋಹನ್ ಪೈ ಮತ್ತು ವನಜಾ ಪೈ ಜೀವಂತ ಇರುವಾಗ ಈ ದಾವೆಯ

ಆಸ್ತಿಯಲ್ಲಿ ವಾಸವಾಗಿದ್ದರು. ನಂತರ ಅವರು ಕಾಡುಬೆಟ್ಟು ಎನ್ನುವ ಸ್ಥಳದಲ್ಲಿ ವಾಸಿಸಲು ಪ್ರಾರಂಭಿಸಿದರು. ಅವರುಗಳು ನನ್ನ ತಂದೆ ಮಾಡಿದ ಬಾಡಿಗೆ ಮನೆಯಲ್ಲಿ ವಾಸ ಇದ್ದರು . ಮೋಹನ್ ಪೈ ಮತ್ತು ವನಜಾ ಪೈ ಎಂದೂ ಕೂಡ ಬಾಡಿಗೆ ಮನೆಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಸದ್ರಿ ಬಾಡಿಗೆ ಮನೆಯ ಮಾಲೀಕರು ಯಾರು ಎಂದು ಗೊತ್ತಿಲ್ಲ . ತಿಂಗಳಿಗೆ ಎಷ್ಟು ಬಾಡಿಗೆ ಎಂದೂ ಕೂಡ ನನಗೆ ಗೊತ್ತಿಲ್ಲ. ಬಾಡಿಗೆ ಕರಾರು ಕೂಡ ನಾನು ನೋಡಿಲ್ಲ . ಮೋಹನ್ ಪೈ ಮತ್ತು ವನಜಾ ಪೈ ರವರು ಬಾಡಿಗೆ ಮನೆಯಲ್ಲಿ ವಾಸ ಇದ್ದ ಬಗ್ಗೆ ಬೇರೆ ಯಾರಿಗಾದರೂ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತು ಮನೆಯ ಮಾಲೀಕರಿಗೆ ಮತ್ತು ಅದರ ಅಕ್ಕಪಕ್ಕದಲ್ಲಿ ಇದ್ದವರಿಗೆ ಗೊತ್ತು ಎಂದು ತಿಳಿಸಿರುತ್ತಾರೆ. ಮೋಹನ್ ಪೈ ರವರು ವಕೀಲರಾದ ಮಾದವ ಆಚಾರ್ ಮುಖೇನ ಯಾವುದೇ ವಿಲ್ ಮಾಡಿಲ್ಲ. 2019 ರಲ್ಲಿ ವೀಲುನಾಮೆ ಬಗ್ಗೆ ಅಂದರೆನಿಡಿ 14 ರ ಬಗ್ಗೆ ನನ್ನ ತಂದೆಗೆ ಗೊತ್ತಾಗಿರುತ್ತದೆ . ಸದ್ರಿ ವಿಲ್ ಬಗ್ಗೆ ಬೇರೆ ಯಾರೋ ಹೇಳಿದ್ದರಿಂದ ನನ್ನ ತಂದೆಗೆ ಗೊತ್ತಾಗಿರುತ್ತದೆ . ಹೇಳಿದವರ ಹೆಸರು ಗೊತ್ತಿಲ್ಲ. ವೀಲುನಾಮೆಯನ್ನು ಯಾರು ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ಮುಖ್ಯವಿಚಾರಣೆಯ ಪ್ಯಾರಾ 3 ಮತ್ತು 4 ರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ವಕೀಲರಾದ ಮಾದವ ಆಚಾರ್ ಕಚೇರಿಗೆ ಹೋಗಿದ್ದೆವು ಆದರೇ ಯಾರು ಇರಲಿಲ್ಲ. ವಕೀಲರಾದ ಇಕ್ಬಾಲ್ ಕಚೇರಿ ಮಾದವ ಆಚಾರ್ ರವರ ಕಚೇರಿಯ ಮೇಲೆ ಇತ್ತು. ಮೋಹನ್ ಪೈ ರವರ ಶವಸಂಸ್ಕಾರ ಮತ್ತು ಇತರೇ ಕಾರ್ಯಗಳನ್ನು ಮೋಹನ್ ಪೈ ರವರ ತಂದೆಯವರು ಮಾಡಿರುತಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನನ್ನ ತಂದೆ ಮಾಡಿರುತಾರೆ . ಮುಖ್ಯವಿಚಾರಣೆಯ ಪ್ಯಾರಾ 5 ರಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ . ವನಜಾ ಪೈ ತೀರಿಕೊಂಡಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ ಮತ್ತು ಎಲ್ಲಿ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವನಜಾ ಪೈ ಎಲ್ಲಿ ವಾಸವಾಗಿದ್ದರು ಎಂದು ಕೂಡ ನನಗೆ ಗೊತ್ತಿಲ್ಲ . ಮೋಹನ್ ಪೈತೀರಿಕೊಂಡ ನಂತರ ನಿಡಿ 14 ವಿಲ್ ನ್ನು ನಾನು , ನನ್ನ ತಂದೆ ಮತ್ತು ತಯಾರಿಸಿದ ವಕೀಲರಾದ ಇಕ್ಬಾಲ್ , 4 ನೇ ಪ್ರತಿವಾದಿ ಜೆಫ್ರಿ ಎನ್ನುವವರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಮೋಹನ್ ಪೈ ನಾವು ಹೇಳುವಂತ ವಿಲ್ ಬರೆದಿಲ್ಲ ಎಂದರೆ ಸರಿಯಲ್ಲ.

ಒ.ಎಸ್. - 07/2018

ಡಿ.ಡಬ್ಲ್ಯು - 03

ಪಾಟೀ ಸವಾಲು ಃ 5 ನೇ ಪ್ರತಿವಾದಿ ಪರ ವಕೀಲರಿಂದ ಃ

ರಾಘವೇಂದ್ರ ಪೈ ನನಗೆ ಗೊತ್ತು . ಅವರು ಏನೂ ಮಾಡುತಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಾಘವೇಂದ್ರ ಪೈ ರವರು ನಿಟ್ಟೂರಿನವರು . ರಾಘವೇಂದ್ರ ಪೈ ಮತ್ತು ಮೋಹನ್ ಪೈ ಅಣ್ಣ ತಮ್ಮಂದಿರು . ರಾಘವೇಂದ್ರ ಪೈ ಎನ್ನುವವರ ಪರಿಚಯ ಇಲ್ಲ ಮತ್ತು ಅವರು ಯಾರು ಎಂದು ಕೂಡ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಉಳಿದ ಪಾಟೀ ಸವಾಲನ್ನು 4 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.